**ಆ) ಬೀದರ್ ಜಿಲ್ಲೆಯಲ್ಲಿ ಮಳೆ ಇಲ್ಲದೆ ತೊಂದರೆಯಾಗಿರುವ ಬಗ್ಗೆ.**

**ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್)** : ಸನ್ಮಾನ್ಯ ಅಧ್ಯಕ್ಷರೇ, ಬೀದರ್ ಜಿಲ್ಲೆಯಲ್ಲಿ ಮಳೆ ಇಲ್ಲದೆ ಬಹಳ ತೊಂದರೆಯಾಗುತ್ತಿದೆ. ಬರಗಾಲ ಪರಿಸ್ಥಿತಿ ಇದೆ. ಅದಕ್ಕಾಗಿ ಮಾನ್ಯ ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳ ಗಮನ ಸೆಳೆಯುತ್ತೇನೆ.

**ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು)** : ಮಾನ್ಯ ಅಧ್ಯಕ್ಷರೇ, ನನ್ನ ಹೇಳಿಕೆ ಹೀಗಿದೆ.

ಕಳೆದ ಮೂರು ವರ್ಷಗಳಿಂದ, ಬೀದರ್ ಜಿಲ್ಲೆಯಲ್ಲಿ ಮಳೆಯ ಕೊರತೆಯಿಂದ ಅಭಾವ ಪರಿಸ್ಥಿತಿ ಉಂಟಾಗಿದ್ದರ ಪ್ರಯುಕ್ತ ಆ ಜಿಲ್ಲೆಯ ಎಲ್ಲಾ ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶವೆಂದು ಘೋಷಿಸಲಾಗಿತ್ತು. ಬರಪರಿಸ್ಥಿತಿಯ ಹಿನ್ನೆಲೆಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ಮೇವು ವ್ಯವಸ್ಥೆ ಇತ್ಯಾದಿ ಪರಿಹಾರ ಕಾಮಗಾರಿಗಳನ್ನು ಹಮ್ಮಿಕೊಳ್ಳಲು ಜಿಲ್ಲೆಗೆ ಸಾಕಷ್ಟು ಅನುದಾನವನ್ನು ಪ್ರಕೃತಿ ವಿಕೋಪ / ಎನ್.ಸಿ.ಸಿ.ಎಫ್. ನಿಧಿಯಿಂದ ಬಿಡುಗಡೆ ಮಾಡಲಾಗಿದೆ. ಅದಲ್ಲದೆ, ಉದ್ಯೋಗಸೃಜನೆ ಕಾಮಗಾರಿಗಳಿಗೆ ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುವ ಆಹಾರಧಾನ್ಯಗಳನ್ನು ಜಿಲ್ಲೆಗೆ ಮರುಹಂಚಿಕೆ ಮಾಡಲಾಗಿದೆ.

ಪ್ರಸಕ್ತ ವರ್ಷವೂ ಕೂಡ ಜಿಲ್ಲೆಯಲ್ಲಿ ಮುಂಗಾರು ಮಳೆ ವಿಫಲವಾಗಿರುವುದರಿಂದ ಖರೀಫ್ ಬಿತ್ತನೆಯು ಗಣನೀಯವಾಗಿ ಕಡಿಮೆಯಾಗಿದ್ದು, ಮುಂದೆ ಕುಡಿಯುವ ನೀರು ಮತ್ತು ಜಾನುವಾರುಗಳ ಮೇವಿನ ಅಭಾವ ತಲೆದೋರುವ ಸಂಭವ ಉಂಟಾಗಬಹುದೆಂದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆದಾಗ್ಯೂ, ಸದರಿ ಜಿಲ್ಲೆಯಲ್ಲಿನ ಮಳೆ ಬೆಳೆ ಹಾಗೂ ಹವಾಮಾನ ಪರಿಸ್ಥಿತಿಯನ್ನು ಆಗಿಂದಾಗ್ಗೆ ಸಮೀಕ್ಷೆ ನಡೆಸಿ, ಸದರಿ ಜಿಲ್ಲೆಯನ್ನು ಅಭಾವ ಪೀಡಿತ ಪ್ರದೇಶವೆಂದು ಘೋಷಿಸುವ ಅವಶ್ಯಕತೆಯ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

**ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್)** : ಸನ್ಮಾನ್ಯ ಅಧ್ಯಕ್ಷರೇ, ಈಗ ಮೇವಿನ ಬಗ್ಗೆ ಪರಿಣಾಮಕಾರಿಯಾಗಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಮೇವು ಒಂದು ಕಟ್ಟಿಗೆ ಈಗ ಏಳು ರೂಪಾಯಿ ಇದೆ. ಇಷ್ಟು ಗಂಭೀರವಾಗಿರತಕ್ಕಂಥ ಪರಿಸ್ಥಿತಿ ನಮ್ಮಲ್ಲಿದೆ. ಅವರು ಹೇಳಿದ ಹಾಗೆ ಮುಂಗಾರು ಅಂತೂ ಹೋಗಿಬಿಟ್ಟಿದೆ. ಮುಂಗಾರು ಬೆಳೆ ಇಲ್ಲ. ಉದ್ದು, ಹೆಸರು, ಜೋಳ ಯಾವುದೂ ಇಲ್ಲ. ನಿನ್ನೆಯೇನೋ ಮಳೆಯಾಗಿದೆಯಂತೆ. ಅದು ಯಾವಾಗ ಬಿತ್ತುತ್ತಾರೋ ಗೊತ್ತಿಲ್ಲ. ಈಗ ಜನರಿಗೆ ಮತ್ತು ದನಕರುಗಳಿಗೆ ಕುಡಿಯುವುದಕ್ಕೆ ನೀರು ಇಲ್ಲ. ನಾನು ಮೊದಲೇ ಪ್ರಶ್ನೆ ಹಾಕಿದೆ. ಆಗ ಇದು ಬಂದಿರಲಿಲ್ಲ. ಈಗ ಬಂದಿದೆ. ಇದು ಬಹಳ ತೊಂದರೆ ಇದೆ. ಡಿ.ಸಿ. ರವರ ಹತ್ತಿರ ಹದಿನೈದು ಲಕ್ಷಕ್ಕಿಂತ ಹೆಚ್ಚು ಹಣ ಇಲ್ಲ. ಅವರು ಅಲ್ಲಿ ಯಾವ ಕೆಲಸವನ್ನು ತೆಗೆದುಕೊಳ್ಳಬೇಕು? ಅದಕ್ಕಾಗಿ ಹೆಚ್ಚಿನ ಹಣವನ್ನು ರಿಲೀಸ್ ಮಾಡಬೇಕು. ಹೆಚ್ಚು ಹಣ ಬಿಡುಗಡೆ ಮಾಡಿ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು ಮತ್ತು ಕುಡಿಯುವ ನೀರಿನ ವ್ಯವಸ್ಥೆಗೆ ಹೆಚ್ಚು ಆದ್ಯತೆಯನ್ನು ಕೊಡಬೇಕು. ಅಲ್ಲಲ್ಲಿ ಗೋಶಾಲೆಗಳನ್ನು ತೆಗೆಯಬೇಕು. ಮೇವಿನ ವ್ಯವಸ್ಥೆ ಮೊದಲು ಆಗಬೇಕು. ದನಕರುಗಳಿಗೆ ಬಹಳ ತೊಂದರೆ ಇದೆ. ಹಾಗೆಯೇ ಜನರು ಬಹಳ ತೊಂದರೆಗೆ ಒಳಗಾಗಿದ್ದಾರೆ. ಬಹಳ ಕೆಟ್ಟ

ಪರಿಸ್ಥಿತಿ ಇದೆ. ಅದಕ್ಕಾಗಿ ಎಲ್ಲಾ ಸೂಕ್ತ ಕ್ರಮಗಳನ್ನು ತೆಗೆದುಕೊಂಡು ಹಣವನ್ನು ಬಿಡುಗಡೆ ಮಾಡಬೇಕು ಹಾಗೂ ಮೇವು, ಗೋಶಾಲೆಗಳನ್ನು ತೆರೆಯಬೇಕು. ಜನರಿಗೆ ಕೆಲಸಕ್ಕೆ ಹಚ್ಚತಕ್ಕಂಥ ವ್ಯವಸ್ಥೆಯನ್ನೂ ಕೂಡ ಮಾಡಬೇಕು. ಬಹಳ ಜನರ ಬೆಳೆ ಹೋಗಿದೆ. ಅವರು ಏನು ಮುಂಗಾರಿನಲ್ಲಿ ಬಿತ್ತಿದ್ದಾರೆ ಅವರಲ್ಲಿ ಪುನಃ ಬೀಜ ಇಲ್ಲ. ಈಗ ಏನಾದರೂ ಬಿತ್ತುವುದಕ್ಕೆ ಹೋದರೆ ಮುಂದೆ ರಬಿಗೆ ಬಹಳ ತೊಂದರೆಯಾಗುತ್ತದೆ. ಅದರ ಬಗ್ಗೆ ಸರ್ಕಾರ ಏನಾದರೂ ಸಹಾಯಧನ ಕೊಡುತ್ತದೆಯೋ ಹೇಗೆ? ಇದರ ಬಗ್ಗೆ ತಾವು ಸ್ಪಷ್ಟವಾಗಿ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ರಾಜೇಂದ್ರವರ್ಮ (ಹುಲಸೂರು)** : ಸನ್ಮಾನ್ಯ ಅಧ್ಯಕ್ಷರೇ, ಈ ಬರಗಾಲದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮೊಟ್ಟಮೊದಲನೆಯದಾಗಿ ತಮಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈಗಾಗಲೇ ನಮ್ಮ ಹಿರಿಯರಾದ ಶ್ರೀ ಗುರುಪಾದಪ್ಪ ನಾಗಮಾರಪಲ್ಲಿಯವರು ಮಾತನಾಡಿದ್ದಾರೆ. ನಿಜವಾಗಿಯೂ ಕೂಡ ಅಲ್ಲಿ ಸತತವಾಗಿ ಕಳೆದ ನಾಲ್ಕು ವರ್ಷಗಳಿಂದ ಮಳೆ ಇಲ್ಲ. ಬೀದರ್ ಜಿಲ್ಲೆಗೆ ಯಾರೂ ಮಂತ್ರಿಗಳಾದವರು ಹೊಸಬರು ಇಲ್ಲ. ಬೀದರ್ ಜಿಲ್ಲೆಗೆ ಸಂಬಂಧ ಇಟ್ಟುಕೊಂಡಿರತಕ್ಕಂಥವರೇ ಮಂತ್ರಿಗಳು ಇದ್ದಾರೆ. ನಿಜವಾಗಿಯೂ ಸರ್ಕಾರಕ್ಕೆ ಇದರ ಬಗ್ಗೆ ಕಿಂಚಿತ್ತಾದರೂ ಕೂಡ ಕಾಳಜಿ ಇಲ್ಲ. ನಾವು ಸತತವಾಗಿ ನಾಲ್ಕು ವರ್ಷಗಳಿಂದ ಇಲ್ಲಿ ಸದನದಲ್ಲಿ ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟು ಹೋರಾಡುತ್ತಿದ್ದೇವೆ. ರೈತರಿಗೆ ಚುನಾವಣೆ ಸಂದರ್ಭದಲ್ಲಿ 'ಎಲ್ಲರೂ ರೈತರು ರಾಷ್ಟ್ರದ ಬೆನ್ನೆಲುಬು, ನಮ್ಮ ರಾಷ್ಟ್ರದ ಹಿತ ಕಾಪಾಡುವಂಥವರು' ಎಂದು ಎಲ್ಲರೂ ಹೇಳುತ್ತಾರೆ. ಆದರೆ ರೈತ ಸಾಯುವಂಥ ಸಮಯದೊಳಗೆ ಯಾರೂ ಮಂತ್ರಿಗಳು ಮತ್ತು ಯಾವ ಸರ್ಕಾರ ಕೂಡ ಅವರನ್ನು ಉಳಿಸಿಕೊಳ್ಳುವುದಕ್ಕೆ ಮುಂದಾಗುವುದಿಲ್ಲ. ಅದಕ್ಕಾಗಿ ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಬೀದರ್ ಜಿಲ್ಲೆಯಲ್ಲಿ ಈಗ ರೈತ ಬಹಳಷ್ಟು ಆತಂಕದಲ್ಲಿದ್ದಾನೆ. ಮುಂಗಾರು ಬೆಳೆಯಂತೂ ಹೋಗಿದೆ. ಸುಮಾರು 3ಲಕ್ಷ ಎರಡು ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ಇಟ್ಟುಕೊಂಡಿದ್ದಂಥ ಪರಿಸ್ಥಿತಿಯೊಳಗೆ ಕೇವಲ 93.550 ಹೆಕ್ಟೇರ್ ಮಾತ್ರ ಬಿತ್ತನೆಯಾಗಿದೆ.

ಅದರಲ್ಲಿ ಎಷ್ಟು ಪ್ರಮಾಣದಲ್ಲಿ ಬಿತ್ತನೆಯಾಗಿದೆ. ಅಷ್ಟು ಪ್ರಮಾಣದಲ್ಲಿ 30 ಪರ್ಸೆಂಟ್ ಬೆಳೆ ಬರಲಾರದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ನಾನು ಸರ್ಕಾರಕ್ಕೆ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ. ಬೀದರ್‌ಗೆ ಸ್ವಲ್ಪ ಗಮನ ಕೊಡಬೇಕು. ಬೀದರ್ ಜಿಲ್ಲೆ ನಮ್ಮ ಕರ್ನಾಟಕ ರಾಜ್ಯದ ಮುಕುಟ ಇದ್ದಹಾಗೆ. ಬೀದರ್ ಬಹುಶಃ ಕಿರೀಟ ಇದ್ದಹಾಗೆ. ಕರ್ನಾಟಕ ಸರ್ಕಾರದ ಮಂತ್ರಿಮಂಡಲದವರಿಗೆ ಬೀದರ್ ಜಿಲ್ಲೆಗೆ ಕರ್ನಾಟಕ ಪ್ರದೇಶದೊಳಗೆ ಆ ಘಾತವೇ ಇಲ್ಲ ಎನ್ನುವಂಥಾದ್ದು ಗೊತ್ತಾಗಿರಬೇಕು. ದಯವಿಟ್ಟು ನಮ್ಮನ್ನು ಕ್ಷಮಿಸಬೇಕು. ರೈತರು ಬಹಳ ಆತಂಕದಲ್ಲಿದ್ದಾರೆ. ಬಡವರಿಗೆ ಕೈಗೆ ಕೆಲಸ ಇಲ್ಲ. ಆಮೇಲೆ, ಕುಡಿಯುವುದಕ್ಕೆ ನೀರಿಲ್ಲ. ಹೆಣ್ಣುಮಕ್ಕಳು ರಾತ್ರಿ ಎರಡು ಗಂಟೆಯವರೆಗೆ ಬೇರೆಯವರ ತೋಟ, ತೋಟಗಳಿಗೆ ತಿರುಗಾಡುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಕುಡಿಯುವುದಕ್ಕೆ ನೀರಿಲ್ಲ. ನಮ್ಮ ದೇಶಕ್ಕೆ ಸ್ವತಂತ್ರವಾಗಿ 55–56 ವರ್ಷಗಳಾಗಿ ಹೋದರೂ ಕೂಡ, ನಮ್ಮ ಕರ್ನಾಟಕ ರಾಜ್ಯದೊಳಗೆ ಇನ್ನೂ ಸಹಿತ ಕುಡಿಯುವ ಸ್ವಚ್ಛ ನೀರು ಸಿಕ್ಕುತ್ತಾ ಇಲ್ಲ. ಆಮೇಲೆ, ಒಬ್ಬ ಮಹಿಳೆ ರಾತ್ರಿ ಎರಡು ಗಂಟೆಯವರೆಗೆ ಕೊಡ ತೆಗೆದುಕೊಂಡು ಮತ್ತೊಬ್ಬರ ತೋಟಕ್ಕೆ ಹೋಗಿ ನೀರು ತರುವಂಥ ಪರಿಸ್ಥಿತಿ ಇನ್ನೂ ಇದೆ ಎನ್ನತಕ್ಕಂಥಾದ್ದು ನಮ್ಮ

ಗಮನದಲ್ಲಿದೆ. ಪತ್ರಿಕಾ ಮಾಧ್ಯಮದವರು ಸಾಕಷ್ಟು ಸರ್ಕಾರದ ಗಮನ ಸೆಳೆಯುವಂಥ ಪ್ರಯತ್ನ ಮಾಡಿದ್ದಾರೆ. ಮಾಧ್ಯಮದವರೂ ಕೂಡ ಸಾಕಷ್ಟು ಹೇಳಿಕೆ ನೀಡಿದ್ದಾರೆ. ಇಲ್ಲಿ ಸಂಶೋಧನಾ ಶಾಖೆಯವರು ಕೂಡ ಎಲ್ಲಾ ರೀತಿಯ ಮಾಹಿತಿ ತರಿಸಿಕೊಂಡಿದ್ದಾರೆ. ಅದಕ್ಕಾಗಿ, ತಕ್ಷಣವಾಗಿ ಬೀದರ್ ಜಿಲ್ಲೆಯನ್ನು ಬರಗಾಲ ಪರಿಸ್ಥಿತಿ ಎಂದು ಘೋಷಣೆಯಾಗಬೇಕು. ತುರ್ತಾಗಿ ಅಲ್ಲಿ ಚಾಲೂ ಆಗಬೇಕು, ಬಡವರ ಕೈಗೆ ಕೆಲಸ ಸಿಗಬೇಕು, ನಿರುದ್ಯೋಗಿ ಯುವಕರಿಗೆ ಕೆಲಸ ಸಿಗಬೇಕು. ಜಾನುವಾರುಗಳಿಗೆ ಮೇವಿನ ವ್ಯವಸ್ಥೆಯಾಗಬೇಕು. ಅದಕ್ಕಾಗಿ, ಕೊನೇಪಕ್ಷ ನಮ್ಮ ಶಾಸಕರ ನಿಧಿಯನ್ನಾದರೂ ಕೊಟ್ಟಿದ್ದರೆ, ನಾವು ದುಡ್ಡು ಕೊಟ್ಟು, ಅಲ್ಲಿ, ಇಲ್ಲಿ ಕೆಲಸ ಪ್ರಾರಂಭ ಮಾಡುತ್ತಿದ್ದೆವು. ಅದರಲ್ಲಿ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ದ್ದೂ ಬಜೆಟ್ ಇಲ್ಲ. ಶಾಸಕರ ನಿಧಿ ಕೂಡ ಇಲ್ಲ. ಆಮೇಲೆ ಮೂರು ವರ್ಷಗಳಿಂದ ಸತತವಾಗಿ ಬರಗಾಲ ಬಿದ್ದಿದೆ. ದಯವಿಟ್ಟು, ತಾವು ಈ ಸದನದಲ್ಲಿ ಹಿರಿಯರಿದ್ದೀರಿ. ತಮ್ಮ ಮೂಲಕ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಬೀದರ್ ಜಿಲ್ಲೆ ಪರವಾಗಿ ನೀವೂ ಕೂಡ ಸಹಕಾರ ಕೊಡಬೇಕು ಎನ್ನುವಂಥಾದ್ದು ನನ್ನ ಉದ್ದೇಶ ಇದೆ. ನಮ್ಮ ಮಾನ್ಯ ಎಂ.ಪಿ. ಪ್ರಕಾಶ್ ಸಾಹೇಬರು ಬಹಳಷ್ಟು ನುರಿತ ರಾಜಕಾರಣಿಗಳಿದ್ದಾರೆ. ರಾಜಕೀಯ ವ್ಯವಸ್ಥೆಯಲ್ಲಿ ಬಹಳಷ್ಟು ಅನುಭವಿಗಳಿದ್ದಾರೆ. ಅವರಿಗೆ ಬೀದರ್‌ಗೆ ನೇರವಾಗಿ ಸಂಪರ್ಕ ಇದೆ. ಬೀದರ್ ಬಗ್ಗೆ ಅವರಿಗೆ ಕಳಕಳಿ ಇದೆ. ಬೀದರ್ ಬಡವರ ಬಗ್ಗೆ ಕಳಕಳಿ ಇದೆ. ದಲಿತರ ಬಗ್ಗೆ ಕಳಕಳಿ ಇದೆ. ಆದರೆ, ಹಾಳಾಗುವಂಥ ಪರಿಸ್ಥಿತಿ, ಉದ್ರೇಕವಾಗುವಂಥ ಪರಿಸ್ಥಿತಿ ನಿಯಂತ್ರಣ ಮಾಡಬೇಕಾಗಿದ್ದರೆ, ತುರ್ತಾಗಿ ಬರಗಾಲ ಪ್ರದೇಶವೆಂದು ಘೋಷಣೆಯಾಗಬೇಕು. ಮತ್ತು ಕಾಮಗಾರಿಗಳು ಪ್ರಾರಂಭವಾಗಬೇಕೆಂಬುದೇ ನನ್ನ ಉದ್ದೇಶ. ಏಕೆಂದರೆ, ಒಂದೊಂದು ಸಾರಿ ಪರಿಸ್ಥಿತಿ ಬಹಳ ಗಂಭೀರವಾಗುತ್ತದೆ. ನಮ್ಮ ಉತ್ತರ ಕರ್ನಾಟಕದಲ್ಲಿರತಕ್ಕ ಜನ, ಬೀದರ್ ಇರಬಹುದು, ರಾಯಚೂರು ಇರಬಹುದು, ಗುಲ್ಬರ್ಗಾ ಇರಬಹುದು ಮತ್ತು ಇನ್ನೂ ಅನೇಕ ತಾಲ್ಲೂಕುಗಳು ಇರಬಹುದು. ಆದರೆ, ಅಂತಹ ಒಂದು ಪರಿಸ್ಥಿತಿ ನಿರ್ಮಾಣವಾದಾಗ, ಯಾರೂ ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ಉತ್ತರ ಕರ್ನಾಟಕದ ಜನತೆಯೊಳಗೆ ಕರ್ನಾಟಕ ರಾಜ್ಯದಲ್ಲಿರತಕ್ಕ ಸರ್ಕಾರದವರು ನೆಗ್ಲೆಟ್ ಮಾಡುತ್ತಿದ್ದಾರೆನ್ನುವಂಥ ಭಾವನೆ, ಮಲತಾಯಿಧೋರಣೆ ಮಾಡುತ್ತಾರೆ ಎನ್ನತಕ್ಕಂಥ ಭಾವನೆ ಇನ್ನೂ ಸಹಿತ ಆ ಕಲ್ಪನೆ ಇದೆ. ಅಚಾನಕ್ಕಾಗಿ ನಮ್ಮ ರಾಜ್ಯ ನಮಗೆ ಪ್ರತ್ಯೇಕವಾಗಿ ಬೇಕು ಅಂದಾಗ, ಇಡೀ ಕರ್ನಾಟಕ ರಾಜ್ಯ ಬಹಳ ಇಕ್ಕಟ್ಟಿನಲ್ಲಿ ಸಿಕ್ಕಿಬೀಳುತ್ತದೆ. ಅದಕ್ಕಾಗಿ ದಯವಿಟ್ಟು ಆ ಪರಿಸ್ಥಿತಿ ಬರಬಾರದು. ನಾನು ಮಾನ್ಯ ಕಂದಾಯ ಸಚಿವರಿಗೆ ಪುನಃ ಪುನಃ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ತಾವು ಗಮನಹರಿಸಿ, ನಾವು ಆಡಿದ ಮಾತಿಗೆ ಮತ್ತು ನಮ್ಮ ಶಾಸಕರೆಲ್ಲಾ ಆಡತಕ್ಕಂಥ ವಿಷಯಕ್ಕೆ ಗಮನಕೊಡಬೇಕು. ಇದು ಬಹಳ ನಾಜೂಕು ಪರಿಸ್ಥಿತಿ ಇದೆ. ಅದಕ್ಕಾಗಿ, ನಾನು ಸನ್ಮಾನ್ಯ ಮಂತ್ರಿಗಳಿಗೆ ರಿಕ್ವೆಸ್ಟ್ ಮಾಡಿಕೊಳ್ಳುವುದು ದಯವಿಟ್ಟು ಕಾಮಗಾರಿಗಳಿಗೆ ತುರ್ತಾಗಿ ಚಾಲನೆ ಕೊಡಬೇಕಾಗಿ ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ಪ್ರಕಾಶ್‌ಖಂಡ್ರೆ (ಭಾಲ್ಕಿ)** : ಮಾನ್ಯ ಅಧ್ಯಕ್ಷರೇ, ಬೀದರ್ ಜಿಲ್ಲೆ ಸತತ ಮೂರು ವರ್ಷಗಳಿಂದ ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಲಾಗಿತ್ತು. ಬಹಳಷ್ಟು ದಿನಗಳು ರೈತರಿಗೆ,

ಕೂಲಿ ಕಾರ್ಮಿಕರಿಗೆ, ರೈತ ಕಾರ್ಮಿಕರಿಗೆ ಕೆಲಸ ಕೊಡಬೇಕಾಗಿತ್ತು. ಮೂರು ವರ್ಷಗಳಿಂದ ಕೊಟ್ಟಿಲ್ಲ. ನಾಲ್ಕನೇ ವರ್ಷವಾದ ಈ ವರ್ಷವೂ ಬೀದರ್ ಜಿಲ್ಲೆ ಮಳೆ ಇಲ್ಲದೆ ಬರಗಾಲದ ಸಮಸ್ಯೆಯನ್ನು ಎದುರಿಸುತ್ತಿದ್ದೇವೆ. ವಿಶೇಷವಾಗಿ ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನಲ್ಲಂತೂ ಅತೀ ಕಡಿಮೆ ಮಳೆ. ಎಲ್ಲಾ ತಾಲ್ಲೂಕುಗಳಿಗೆ ಹೋಲಿಸಿದರೆ ಭಾಲ್ಕಿ ತಾಲ್ಲೂಕಿನಲ್ಲಿ ಮಳೆ ಕಡಿಮೆ. ವಿಶೇಷವಾಗಿ ಬಿತ್ತನೆ ಕೆಲಸ ಭಾಲ್ಕಿ ಕ್ಷೇತ್ರದಲ್ಲಿ ಮತ್ತು ಔರಾದ್ ತಾಲ್ಲೂಕಿನಲ್ಲಿ 20 ಪರ್ಸೆಂಟ್ ಬಿತ್ತನೆಯೇ ಆಗಿಲ್ಲ. ಒಂದುವೇಳೆ ಬಿತ್ತನೆಯಾದ ಬೀಜಗಳೂ ಕೂಡ ಮಳೆ ಇಲ್ಲದೆ ಮೊಳಕೆ ಬಂದಿಲ್ಲ. ಹಾಗಾಗಿ ರೈತರು ಬೀಜ ಮತ್ತು ಗೊಬ್ಬರ ಕಳೆದುಕೊಂಡು ಕಂಗಾಲಾಗಿದ್ದಾರೆ. ಈ ಮುಂಗಾರು ಬಿತ್ತನೆ ಮಾಡಿದ ಜನರು ಏನು ಕಳೆದುಕೊಂಡಿದ್ದಾರೆ ಅವರಿಗೆ ಹಿಂಗಾರು ಬಿತ್ತನೆ ಸಲುವಾಗಿ ಬೀಜ ಗೊಬ್ಬರ ಮತ್ತು ಪರಿಹಾರಧನ ಕೊಡಬೇಕು. ಅದರ ಜೊತೆಗೆ ರೈತ ಕಾರ್ಮಿಕರು ಕೆಲಸವಿಲ್ಲದೆ ಬೇರೆ ಕಡೆ ಹೋಗುತ್ತಿದ್ದಾರೆ. ಬೀದರ್ ಜಿಲ್ಲೆಯಿಂದ ಮಹಾರಾಷ್ಟ್ರ, ಆಂಧ್ರ ಈ ಕಡೆಗಳಿಗೆ ಏನು ವಲಸೆ ಹೋಗುತ್ತಿದ್ದಾರೆ, ಅದನ್ನು ತಡೆಗಟ್ಟಬೇಕು. ಚುನಾವಣೆಯಾದ ಇವತ್ತಿನವರೆಗೆ ಯಾವುದೇ ಹೊಸಕೆಲಸಗಳು, ಬರಗಾಲಪೀಡಿತ ಕೆಲಸಗಳೇನಿವೆ ಯಾವುದೇ ಕೆಲಸಗಳು ನಡೆಯುತ್ತಾ ಇಲ್ಲ. ಮೊದಲು ಎಂ.ಎಲ್.ಎ. ಅಧ್ಯಕ್ಷತೆಯೊಳಗೆ ಕೆಲಸ ನಡೆದು, ಅದರ ನಂತರ ಹೊಸ ಕೆಲಸಗಳು, ಬೀದರ್ ಜಿಲ್ಲೆಯಲ್ಲಿ ಬರಗಾಲದ ಕೆಲಸಗಳು ನಡೆಯುತ್ತಾ ಇಲ್ಲ. ಈ ಕೆಲಸಗಳು ನಡೆಯಬೇಕು. ಈಗ ತ್ವರಿತ ರೀತಿಯಿಂದ ತೆಗೆದುಕೊಳ್ಳಬೇಕಾಗುತ್ತದೆ. ನಾವು ಸರ್ಕಾರಿ ಅಧಿಕಾರಿಗಳ ವರದಿ ನೋಡಿಕೊಳ್ಳುತ್ತಾ ಕುಳಿತುಕೊಂಡರೆ ಬಹಳಷ್ಟು ಸಮಸ್ಯೆಯಾಗುತ್ತದೆ. ಹಿರಿಯರಾದ ಮಾನ್ಯ ಎಂ.ಪಿ. ಪ್ರಕಾಶ್‌ರವರ ಗಮನ ಸೆಳೆಯುತ್ತೇನೆ. ಎರಡು ವರ್ಷಗಳ ಹಿಂದೆ ಬೀದರ್ ಜಿಲ್ಲೆಯಲ್ಲಿ ಆದಂಥ ಘಟನೆಯನ್ನು ಹೇಳುತ್ತೇನೆ. ಕ್ರಾಫ್ ಇನ್‌ಶ್ಯೂರೆನ್ಸ್‌ನಲ್ಲಿ ಕಳೆದ ಎರಡು ವರ್ಷಗಳಿಂದ ಹಣ ಬಂದಿಲ್ಲ. ಆದರೂ ಕ್ರಾಫ್ ಇನ್‌ಶ್ಯೂರೆನ್ಸ್ ಬಗ್ಗೆ ರಿಪೋರ್ಟ್ ಯಾವರೀತಿ ಕೊಟ್ಟಿದ್ದಾರೆ ಎಂದರೆ, ಅಂಕಿಅಂಶಗಳ ಇಲಾಖೆ, ಕಂದಾಯ ಇಲಾಖೆ ಮತ್ತು ಕೃಷಿ ಇಲಾಖೆ ಈ ಮೂರು ಇಲಾಖೆಯವರೂ ಬೇರೆ ಬೇರೆ ವರದಿ ಕೊಟ್ಟರು. ಹಾಗಾಗಿ ಬೀದರ್ ಜಿಲ್ಲೆಯ ರೈತರಿಗೆ ಕ್ರಾಫ್ ಇನ್‌ಶ್ಯೂರೆನ್ಸ್ ಹಣ ಸಿಗದೇ ಬಹಳಷ್ಟು ಜನರಿಗೆ ಸಮಸ್ಯೆಯಾಗಿದೆ. ಹಾಗಾಗಿ ಎರಡು ವರ್ಷಗಳ ಕ್ರಾಪ್ ಇನ್‌ಶ್ಯೂರೆನ್ಸ್ ಹಣವನ್ನು ಬಿಡುಗಡೆ ಮಾಡಬೇಕು. ಅದು ಮಾಡಿದರೆ ಬೀದರ್ ಜಿಲ್ಲೆಯ ರೈತರಿಗೆ ಸಹಾಯವಾಗುತ್ತದೆ. ಕಳೆದುಕೊಂಡಂಥ ಬೀಜ, ಗೊಬ್ಬರ ಇವುಗಳ ಬಗ್ಗೆ ಏನು ಖರ್ಚು ಬರುತ್ತದೆ ಇದರ ಬಗ್ಗೆ ಮಾನ್ಯ ಹಿರಿಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಅದರ ಜೊತೆಗೆ ಮುಂಗಾರು ಏನಿದೆ, ಇದರಲ್ಲಿ ಕಳೆದುಕೊಂಡವರಿಗೆ ವಿಶೇಷವಾಗಿ ಬೀದರ್ ಜಿಲ್ಲೆ ಜನರಿಗೆ ಆದಷ್ಟು ಬೇಗ ಹಿಂಗಾರು ಬಿತ್ತನೆ ಸಲುವಾಗಿ ಅವರ ಸಹಾಯಕ್ಕೆ ಬರಬೇಕಾದರೆ ಬೀಜ, ಗೊಬ್ಬರ ಮತ್ತು ಪರಿಹಾರಧನ ಕೊಡಬೇಕು. ಬೀದರ್ ಜಿಲ್ಲೆ ಬರಪೀಡಿತ ಜಿಲ್ಲೆಯೆಂದು ಏನಿದೆ, ತಾವು ಘೋಷಿಸಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಮಂತ್ರಿಗಳಲ್ಲಿ ಒತ್ತಡ ತರುತ್ತಿದ್ದೇನೆ.

**ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :** ಸನ್ಮಾನ್ಯ ಅಧ್ಯಕ್ಷರೇ, ಬಹಳ ಗಂಭೀರವಾದ ವಿಷಯವನ್ನು ಹಿರಿಯಸದಸ್ಯರಾದ ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರು ಮಾನ್ಯ ಶಾಸಕರಾದ ರಾಜೇಂದ್ರವರ್ಮರವರು, ಹಾಗೂ ಮಾನ್ಯ ಪ್ರಕಾಶ್ ಖಂಡ್ರೆಯವರು ಎತ್ತಿದ್ದಾರೆ. ಇವತ್ತು ಬೀದರ್ ಜಿಲ್ಲೆಯಲ್ಲಿ ಬಹಳ ಆತಂಕಕಾರಿಯಾದ ಪ್ರಸಂಗ

ಇದೆ. ಮುಂಗಾರು ಮಳೆ ಕೈಕೊಟ್ಟಿದ್ದರಿಂದ, ಇಟ್ಟಿರತಕ್ಕಂಥ ಬೆಳೆ ಕೂಡ, ಮೊಳಕೆ ಒಡೆಯದಿರುವಂಥ ಪರಿಸ್ಥಿತಿ ಉಂಟಾಗಿದೆ ಎಂಬುದು ಗೊತ್ತಿದೆ. ಆದ್ದರಿಂದಲೇ ಈ ವಿಚಾರದಲ್ಲಿ ಹೇಳಿದ್ದೇವೆ. ಮುಂದೆ ಈ ಪ್ರದೇಶವನ್ನು ಅಭಾವಪೀಡಿತ ಪ್ರದೇಶವೆಂದು ಘೋಷಿಸುವುದಕ್ಕೆ ಕೆಲವೊಂದು ಮಾನದಂಡಗಳನ್ನು ನಾವು ಮಾಡಲೇಬೇಕಾಗುತ್ತದೆ. ಅದರ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇವೆ. ಇದರ ನಡುವೆ ತಾವೇನು ಹೇಳಿದ್ದೀರಿ. ಈಗ ಬರದ ಛಾಯೆ ಇರುವುದರಿಂದ, ಕುಡಿಯುವ ನೀರಿಗೆ ಸಂಬಂಧಿಸಿದಂತೆ ಬರಗಾಲ ಪರಿಹಾರ ನಿಧಿಯಿಂದ ಈಗಾಗಲೇ ಎಲ್ಲಾ ಜಿಲ್ಲೆಗಳಿಗೆ ಕೊಟ್ಟಂತೆ ಹಣವನ್ನು ಕೊಟ್ಟಿದ್ದೇವೆ. ಅಂದರೆ, ಅಕ್ಕಿಯನ್ನು ಧಾನ್ಯವನ್ನು ನಾವು ಕೊಟ್ಟಿದ್ದೇವೆ. ಆದರೆ, ಇತ್ತೀಚಿನ ಗೊಂದಲದಲ್ಲಿ ಸಿ.ಒ.ಡಿ. ಎನ್‌ಕ್ವೈರಿ ಮೊದಲಾದವುಗಳ ಗೊಂದಲಗಳ ಹಿನ್ನೆಲೆಯಲ್ಲಿ ಇಂಜಿನಿಯರ್ ಸಂಘದವರು, ನೀವು ಈ ಬರಗಾಲ ಕಾಮಗಾರಿಗಳನ್ನು ಮಾಡುವಂಥ ವಿಚಾರದಲ್ಲಿ ನಿಮ್ಮ ಮಾರ್ಗಸೂಚಿಗಳೇನಿವೆ ಅವುಗಳನ್ನು ಬದಲಿಸದೇ ಹೋದರೆ, ನಾವು ಕೆಲಸಗಳನ್ನು ಕೈಗೊಳ್ಳುವುದು ಬಹಳ ಕಷ್ಟವೆಂದು ಅವರು ಅಸಹಾಕಾರವನ್ನು ತೋರಿಸುತ್ತಿದ್ದಾರೆ. ಆ ಕಾರಣಕ್ಕಾಗಿ ಕೇಂದ್ರ ಸರ್ಕಾರದಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿ ಪತ್ರ ಬರೆದಿದ್ದೇವೆ. ನೀವು ಮಾರ್ಗಸೂಚಿಗಳನ್ನೇನು ಕಳುಹಿಸಿದ್ದೀರಿ, ಅವು ಆಯಾ ರಾಜ್ಯಕ್ಕೆ ವಿಶಿಷ್ಟವಾದಂಥ ಸನ್ನಿವೇಶಗಳು ಇರುತ್ತವೆ ಆದ್ದರಿಂದ ಅವುಗಳಲ್ಲಿ ಅಳವಡಿಸಿಕೊಳ್ಳತಕ್ಕ ಸ್ವಾತಂತ್ರ್ಯವನ್ನು ಆಯಾ ರಾಜ್ಯ ಸರ್ಕಾರಗಳಿಗೆ ಕೊಡಬೇಕು ಎನ್ನುವಂಥ ಪತ್ರವನ್ನು ಕೂಡ ಬರೆದಿದ್ದೇವೆ. ಇದರ ಜೊತೆಗೆ ಶೇಕಡ 50ಕ್ಕಿಂತ ಹೆಚ್ಚು ಮೆಟೀರಿಯಲ್ ಕಾಂಪೊನೆಂಟ್ ಬಹಳ ಸಲ ಈ ಬರಗಾಲ ಕಾಮಗಾರಿಯೆಂದು ನಾವು ಹೇಳಿದರೂ ಕೂಡ ಅನೇಕ ಶಾಸಕರು ಬೇರೆ ಬೇರೆ ಕಟ್ಟಡದ ಕೆಲಸಗಳನ್ನು ಮತ್ತೊಂದನ್ನು ಹೇಳಿ ಮಾಡಿಸಿರತಕ್ಕಂಥ ಕಾರಣದಿಂದಲೂ ಕೂಡ ಸ್ವಲ್ಪ ತೊಂದರೆಯಾಗಿದೆ. ಆದರೂ ಕೂಡ ನಾವು ನಿಖರವಾಗಿ ಅವರಿಗೆ ಹೇಳುತ್ತೇವೆ. ಜಲಸಂವರ್ಧನೆಗೆ ಸಂಬಂಧಪಟ್ಟಂತೆ ಮಳೆ ಕೊಯ್ಲುಗಳನ್ನು ಮಾಡಲಿಕ್ಕೆ ಬೇಕಾಗಿರುವಂತೆ ಕೃಷಿ ಹೊಂಡಗಳನ್ನು ಸಮಪಾತಳಿ ಒಡ್ಡುಗಳನ್ನು ನಿರ್ಮಾಣ ಮಾಡಿ ಹೊಸ ಪದ್ಧತಿಯ ಪ್ರಕಾರ ಕೃಷಿಯನ್ನು ಮಾಡಲಿಕ್ಕೆ ಬೇಕಾಗಿರುವಂಥ ರೀತಿಯಲ್ಲೇ ಈ ಹಣವನ್ನು ಖರ್ಚು ಮಾಡಬೇಕು. ಇವತ್ತು ಇರುವಂಥ ಮಾರ್ಗಸೂಚಿಯ ಅನುಸಾರದಲ್ಲಿ ಕೆಲಸ ಮಾಡಬೇಕು ಎನ್ನುವುದರ ಬಗ್ಗೆ ಅವರಿಗೆ ಹೇಳಿದ್ದೇವೆ. ಈ ಬಗ್ಗೆ ಕೂಡಲೇ ಕ್ರಮವನ್ನು ಕೈಗೊಂಡು ಕೆಲಸಕಾರ್ಯಗಳನ್ನು ಪ್ರಾರಂಭ ಮಾಡುತ್ತೇವೆ.

**6.40 ಪಿ ಎಂ**

ಮಾನ್ಯ ಅಧ್ಯಕ್ಷರೇ, ಇದು ಬಹಳ ಗಹನವಾದ ವಿಚಾರವಾಗಿರುವುದರಿಂದ ನಾವು ಒಂದು ನೋಟೀಸನ್ನು ಕೊಟ್ಟಿದ್ದೇವೆ ಅದನ್ನು ಚರ್ಚೆಗೆ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ಅದನ್ನು ತಾವು ಸಮಯಾವಕಾಶ ನೋಡಿಕೊಂಡು ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಇರುವಂಥಹ ಆತಂಕವನ್ನು ಗೊಂದಲವನ್ನು ನಾವು ನಿವಾರಿಸಬಹುದು. ಈಗಾಗಲೇ ನಾನು ಬೀದರ್ ಜಿಲ್ಲೆಗೆ ಸಂಬಂಧಪಟ್ಟಂತೆ ಅಲ್ಲಿ ಕುಡಿಯುವ ನೀರಿಗೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತೇವೆ. ಹಣವನ್ನು ಬಿಡುಗಡೆ ಮಾಡುವಂತಹ ಕೆಲಸವನ್ನೂ ಸಹ ಮಾಡುತ್ತೇವೆ. ಈಗ ಬಹಳ ಮುಖ್ಯವಾಗಿರತಕ್ಕಂಥ ಪ್ರಶ್ನೆ ಈಗ ಮುಂಗಾರು ವಿಫಲವಾಗಿರುವಂತಹ ಹಿನ್ನೆಲೆಯಲ್ಲಿ ಬಿತ್ತಿರುವ ಬೀಜಗಳು ಮೊಳಕೆ ಒಡೆದಿಲ್ಲ. ಆದ್ದರಿಂದ ಬೀಜ ಮತ್ತು ಗೊಬ್ಬರವನ್ನು ರಿಯಾಯಿತಿ ದರದಲ್ಲಿ ಕೊಡಬೇಕೆನ್ನುವ ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ. ನಾನು ಮಾನ್ಯ ಕೃಷಿ

ಸಚಿವರ ಗಮನಕ್ಕೆ ಈ ವಿಚಾರವನ್ನು ತಂದು ಬರ ಕಾಮಗಾರಿಗಳಲ್ಲಿ, ಪರಿಹಾರದ ಕಾಮಗಾರಿಗಳಲ್ಲಿ ಸುಮಾರು ಎಂಟು ಕೋಟಿ ರೂಪಾಯಿಗಳನ್ನು ಹೆಚ್ಚಾಗಿ, ಬೀಜವನ್ನು ರಿಯಾಯಿತಿ ದರದಲ್ಲಿ ಕೊಡಲಿಕ್ಕಾಗಿ ನಾವು ಹಣ ಬಿಡುಗಡೆ ಮಾಡಿದ್ದೇವೆ. ಆದರೆ ಇಂತಹ ವಿಚಾರ ಬಂದಾಗಲೂ ಕೂಡ ನಾವು ಮತ್ತೆ ಎರಡನೆ ಬಾರಿ ಕೊಡಲಿಕ್ಕೆ ಸಾಧ್ಯವೇ ಎನ್ನುವ ಬಗ್ಗೆ ನಿಯಮಾವಳಿಗಳು ನನಗೆ ತತ್‌ಕ್ಷಣ ಗೊತ್ತಿಲ್ಲ ಅದನ್ನು ನಾನು ಮಾನ್ಯ ಕೃಷಿ ಸಚಿವರ ಜೊತೆಗೆ ಮಾತನಾಡಿ ಎರಡನೆ ಬಾರಿ ಕೊಟ್ಟರೂ ಚಿಂತೆ ಇಲ್ಲ ಏಕೆಂದರೆ ಮರು ಬಿತ್ತನೆ ಮಾಡುವಂತಹ ಕೆಲಸ ಇರುತ್ತದೆ ಮತ್ತೆ ಈ ಸಂದರ್ಭಗಳಲ್ಲಿ ಅನುಕೂಲ ಮಾಡಿಕೊಡಬೇಕಾಗುತ್ತದೆ. ನಾವು ಕೊಡುವಂತಹ ರಿಯಾಯಿತಿ ದರ ಬರೀ ಹಿಂದುಳಿದವರು ದಲಿತರು ಎನ್ನುವುದಕ್ಕಿಂತ ಹೆಚ್ಚಾಗಿ ಅಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕೊಡುತ್ತೇವೆ. ದೊಡ್ಡ ಹಿಡುವಳಿದಾರರಿಗೆ ಕೊಡುತ್ತಿಲ್ಲ. ಅದರ ಬದಲಾವಣೆಯಾಗಬೇಕು ಎನ್ನುವಂತಹ ಒತ್ತಡ ಕೂಡ ಇದೆ. ಈ ಹಿನ್ನೆಲೆಯಲ್ಲಿ ಮಾನ್ಯ ಕೃಷಿ ಸಚಿವರ ಗಮನಕ್ಕೆ ತಂದು ಬೀಜ ಮತ್ತು ಗೊಬ್ಬರವನ್ನು ರಿಯಾಯಿತಿ ದರದಲ್ಲಿ ಕೊಡತಕ್ಕಂಥಾದ್ದಕ್ಕೆ ಸರ್ಕಾರ ಪರಿಶೀಲನೆ ಮಾಡುತ್ತದೆ. ಕಾಲಕಾಲಕ್ಕೆ ಹವಾಮಾನದ ಸ್ಥಿತಿ ಅಲ್ಲಿರುವಂತಹ ವಸ್ತು ಸ್ಥಿತಿಯ ಮೇಲೆ ಅವಲಂಬಿತವಾಗಿ ನಾವು ಈ ಬರಗಾಲ ಎನ್ನುವಂತಹ ವಿಶ್ಲೇಷಣೆಯ ಬಗ್ಗೆ ಇನ್ನು ಸ್ವಲ್ಪವೇ ದಿವಸಗಳಲ್ಲಿ ನಿರ್ಣಯವನ್ನು ಕೈಗೊಳ್ಳುತ್ತೇವೆ.

**ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ** : ಮಾನ್ಯ ಅಧ್ಯಕ್ಷರೇ, ಹುಲ್ಲಿನ ಬಗ್ಗೆ ಏನೂ ಹೇಳಲಿಲ್ಲ. ದನಗಳ ಮೇವಿನ ಬಗ್ಗೆ ದನಗಳ ಮೇವಿನ ಬಗ್ಗೆ ಅಲ್ಲಲ್ಲಿ ಗೋಶಾಲೆ ತೆರೆಯಿರಿ ಅಥವಾ ಎಲ್ಲಿಂದರಾದರೂ ಮೇವು ತರಿಸಿ ಅವರಿಗೆ ಕೊಡಬೇಕಾಗುತ್ತದೆ. 7–8 ರೂಪಾಯಿ ಒಂದು ಕಟ್ಟು ಹುಲ್ಲು, ಅದು ಒಂದು ಕಷ್ಟ. ಇನ್ನೊಂದು ಕಾಳುಗಳು. ಬರಗಾಲ ಅಂದತಕ್ಷಣ ಕಾಳುಗಳು ಸಿಗುವುದಿಲ್ಲ. ಕಾಳುಗಳನ್ನು ಕಳುಹಿಸುತ್ತೇವೆಂದು ಹೇಳಿದಿರಿ, ಅದರ ಬಗ್ಗೆ ಚರ್ಚೆ ಕೂಡ ಅಸೆಂಬ್ಲಿಯಲ್ಲಿ ಹಿಂದೆ ಆಗಿತ್ತು. ಆ ಕೆಲಸ ಮಾಡಲು ಯಾವ ಅಧಿಕಾರಿಗಳೂ ಸಹ ತಯಾರಿಲ್ಲ. ಕಾರಣ ಕೂಲಿಗಾಗಿ ಕಾಳು ಯೋಜನೆಯಲ್ಲಿ ಅಕ್ಕಿ ಒಂದು ಕಿಲೋಗೆ 3 ರೂಪಾಯಿ ಮಾಡಿದ್ದೇವೆ. 3 ರೂಪಾಯಿ ಅಕ್ಕಿ ಅಲ್ಲಿ 6 ರೂಪಾಯಿಗೆ ಸಿಗುತ್ತದೆ. ಯಾರೂ ಅದನ್ನು ತೆಗೆದುಕೊಂಡು ಮಾಡುವುದಕ್ಕೆ ತಯಾರಿಲ್ಲ. ಪ್ರಾಕ್ಟಿಕಲ್ ಆಗಿ ಮೆಷಿನ್‌ಗಳಲ್ಲಿ ಕೆಲಸ ಮಾಡಿಸುತ್ತಾರೆ. ದುಡ್ಡು ಕೊಡುತ್ತಾರೆ. ಆದ್ದರಿಂದ ಇವತ್ತು ಯಾರೂ ಕೂಲಿ ಮಾಡುವುದಕ್ಕೆ ತಯಾರಿಲ್ಲ. ಪರಿಸ್ಥಿತಿ ಹೀಗಿದೆ. ಆದ್ದರಿಂದ ಇದು ಪ್ರಾಕ್ಟಿಕಲ್ ಆಗಿರುವುದರಿಂದ ಇದನ್ನು ಯಾವ ರೀತಿ ಬಗೆಹರಿಸುತ್ತೀರಿ ಅದಕ್ಕೆ ಯಾವ ಇಂಜಿನೀಯರ್‌ಗಳೂ ಸಹ ಕೆಲಸ ಮಾಡುವುದಕ್ಕೆ ರೆಡಿಯಾಗಿಲ್ಲ. ನಾವು ನಾಳೆ ಸಸ್ಪೆಂಡ್ ಆಗುತ್ತೇವೆ, ಆದ್ದರಿಂದ ಈ ಕೆಲಸ ಮಾಡುವುದಿಲ್ಲವೆಂದು ಹೇಳುತ್ತಾರೆ. ಈ ಪರಿಸ್ಥಿತಿ ಅಲ್ಲಿ ಬಂದಿದೆ. ಎಷ್ಟೋ ಕೆಲಸಗಳನ್ನು ಮೆಷಿನ್‌ನಲ್ಲಿ ಮಾಡಿಸುತ್ತಾರೆ. ಪ್ರಾಕ್ಟಿಕಲ್ ಆಗಿ ಈ ಪರಿಸ್ಥಿತಿ ಇದೆ. ಅದಕ್ಕೆ ತಾವು ಬೇರೆ ಏನಾದರೂ ಒಂದು ನಿಯಮವನ್ನು ಜಾರಿಗೆ ತರಬೇಕಾಗುತ್ತದೆ. ಇಲ್ಲದಿದ್ದರೆ ಬಹಳ ತೊಂದರೆಯಾಗುತ್ತದೆ. ಇದರ ಬಗ್ಗೆ ಸ್ಪಷ್ಟಪಡಿಸಬೇಕು ಮತ್ತು ಬೀದರ್‌ನ್ನು ಬರಗಾಲ ಪ್ರದೇಶವೆಂದು ಘೋಷಿಸಬೇಕು.

**ಶ್ರೀ ಪ್ರಕಾಶ್ ಖಂಡ್ರೆ** : ಮಾನ್ಯ ಅಧ್ಯಕ್ಷರೇ, ಇಂತಿಷ್ಟು ಹಣ ಮತ್ತು ಅಕ್ಕಿಯನ್ನು ಕೊಡಬೇಕೆಂದು ಸರ್ಕಾರದ ಆದೇಶ ಇದೆ. ಇವತ್ತು ರೈತರ ಸಮಸ್ಯೆ ಯಾವ ರೀತಿ ಇದೆ ಅಂದರೆ ತಮ್ಮ ಹೊಲದಲ್ಲಿ ಬಿತ್ತಲಿಕ್ಕೆ ಬೀಜ ಇಲ್ಲ. ಅಂತಹ ಸಂದರ್ಭದಲ್ಲಿ ಅವರು ಹಣ ಕೊಟ್ಟು ಬೀಜ

ತರಲು ಆಗುವುದಿಲ್ಲ. ಬೀದರ್ ಜಿಲ್ಲೆಗೆ ತಾವು ವಿಶೇಷವಾಗಿ ನಮ್ಮ ಬಗ್ಗೆ ಕಳಕಳಿ ಇಟ್ಟುಕೊಂಡು ಒಂದು ಸ್ಪೆಷಲ್ ಆರ್ಡರ್ ಮಾಡಬೇಕು.

**ಶ್ರೀ ಎಂ.ಪಿ. ಪ್ರಕಾಶ್** : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ಇಬ್ಬರೂ ಕೂಡ ಈ ವಿಚಾರವಾಗಿ ಚರ್ಚೆ ಮಾಡಿದ್ದಾರೆ. ನಾನು ಆಗಲೇ ಹೇಳುವಾಗ ಮರೆತಿದ್ದೆ. ಈಗಾಗಲೇ ನಾವು ಮೇವನ್ನು ಬೀಜವನ್ನು ಶೇಕಡ 50ರ ರಿಯಾಯಿತಿ ದರದಲ್ಲಿ ಮಾರಾಟ ಮಾಡಬೇಕೆನ್ನುವ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಇದೂ ಕೂಡ ಬಹಳ ಕಷ್ಟವಾಗುವುದರಿಂದ ನಾನು ಸಚಿವರು ಸಂಪುಟದ ಸಭೆಯಲ್ಲಿ ಕೂಡ ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಈಗ ಇರುವಂತಹ ಮೇವಿನ ಸಂಗ್ರಹ ಏನಿದೆ ಅದನ್ನು ಪುಕ್ಕಟೆಯಾಗಿ ಕೊಡಬೇಕೋ, ಮತ್ತೆ ಸಣ್ಣ ರೈತರು ಮತ್ತು ಅತಿ ಸಣ್ಣ ರೈತರು ಎನ್ನತಕ್ಕಂಥ ಪ್ರಶ್ನೆ ಬರುತ್ತದೆ. ಅವರಿಗೂ ಕೂಡ ನಾವು ಪುಕ್ಕಟೆಯಾಗಿ ಕೊಡಬೇಕು, ದೊಡ್ಡ ರೈತರಿಗೆ ರಿಯಾಯಿತಿ ದರದಲ್ಲಿ ಕೊಡಬೇಕು ಅಂತ ಯೋಚನೆ ಮಾಡುವುದು ಇದರ ಜೊತೆಗೆ ಅಲ್ಲಿ ಮೇವಿನ ಅಭಾವ ಇದೆ ಎನ್ನುವುದೂ ಸಹ ನಮಗೆ ಗೊತ್ತಾಗಿದೆ. ಸಂಗ್ರಹ ಮಾಡಿರತಕ್ಕಂಥ ಮೇವಿನ ಬ್ಯಾಂಕ್ ಕೂಡ ಕಡಿಮೆ ಇದೆ ಎನ್ನುವಂತಹ ವರದಿ ಕೂಡ ನಾವು ತರಿಸಿಕೊಂಡಿದ್ದೇವೆ. ಆ ಹಿನ್ನೆಲೆಯಲ್ಲಿ ಮೇವು ಬಳಕೆಯಾಗದೇ ಇರತಕ್ಕಂಥ ಕೆಲವು ಜಿಲ್ಲೆಗಳಿಂದ ತರಿಸಲು ಟ್ರಾನ್ಸ್‌ಪೋರ್ಟ್ ಮಾಡಲು ಬಹಳ ದುಬಾರಿಯಾಗಬಹುದು, ಆದ್ದರಿಂದ ಅದೇ ಹಣವನ್ನು ಅಲ್ಲಿ ಕೊಟ್ಟು ಮೇವು ಖರೀದಿ ಮಾಡಿ ಉಚಿತವಾಗಿ ಕೊಡಲಿಕ್ಕೆ ಸಾಧ್ಯವೇ ಎನ್ನುವುದರ ಬಗ್ಗೆ ನಾನು ಚರ್ಚೆ ಮಾಡಿಸುತ್ತೇನೆ. ಈಗ ನಾವು ತೆಗೆದುಕೊಂಡಿರತಕ್ಕಂಥ ನಿರ್ಣಯದಲ್ಲಿ ಶೇಕಡ 50ರ ರಿಯಾಯಿತಿ ದರದಲ್ಲಿ ಕೊಡಬೇಕೆಂದು ಮಾಡಿದ್ದೇವೆ. ತಾವು ಹೇಳಿದ ಮಾತನ್ನು ನಾನು ಇವತ್ತು ಮುಖ್ಯಮಂತ್ರಿಗಳ ಮತ್ತು ಉಪ ಮುಖ್ಯಮಂತ್ರಿಗಳ ಗಮನಕ್ಕೆ ತರದು ಆದಷ್ಟು ಬೇಗ ಪರಿಹಾರವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಬರಗಾಲದ ಬಗ್ಗೆ ಈಗ ಏನು ತಾವು ಪ್ರಶ್ನೆ ಮಾಡಿದ್ದೀರಿ ಇವು ಕೇಂದ್ರ ಸರ್ಕಾರದ ನಿಯಮಾವಳಿಗಳು. ಆದ್ದರಿಂದ ನಾವು ಸ್ವತಂತ್ರವಾಗಿ ಆ ಬಗ್ಗೆ ನಿರ್ಧಾರ ಮಾಡುವುದಕ್ಕೆ ಆಗುವುದಿಲ್ಲ. ಕೇಂದ್ರ ಸರ್ಕಾರದ ಮನವೊಲಿಸಬೇಕಾಗುತ್ತದೆ. ನಾವು ಈಗಾಗಲೇ ಇದರ ಬಗ್ಗೆ ಪತ್ರಬರೆದಿದ್ದೇವೆ. ಇದೂ ಕೂಡ ಚರ್ಚೆಯಾಗುತ್ತದೆ. ಮಾನ್ಯ ಸದಸ್ಯರಾದ ಚಂದ್ರಣ್ಣನವರು, ಮಾನ್ಯ ವೆಂಕಟೇಶ್‌ರವರು ಮಾನ್ಯ ಎ.ಟಿ. ರಾಮಸ್ವಾಮಿಯವರು ಇದರ ಬಗ್ಗೆ ಈಗಾಗಲೇ ಒಂದು ನೋಟೀಸನ್ನು ಕೊಟ್ಟಿದ್ದಾರೆ. ತಾವು ಅದಕ್ಕೆ ಸಮಯ ಕೊಟ್ಟಾಗ ಅದರ ಬಗ್ಗೆ ಕೂಲಂಕಷವಾಗಿ ಚರ್ಚೆಯಾಗಿ ಯಾವ ತರಹದಿಂದ ಇದನ್ನು ಕಾರ್ಯ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎನ್ನುವ ನಿರ್ಣಯವನ್ನು ಮಾಡೋಣ ಎನ್ನುವ ಮಾತನ್ನು ಹೇಳಿ ನಾವು ನಿಮ್ಮ ಜೊತೆಗಿದ್ದೇವೆಂದು ಹೇಳುತ್ತೇನೆ.

**ಶ್ರೀಮತಿ ಟಿ. ಭಾಗೀರಥಿ (ಕೂಡ್ಲಗಿ)** : ಮಾನ್ಯ ಅಧ್ಯಕ್ಷರೇ, ಈ ಮೇವಿನ ಬಗ್ಗೆ ಈಗ ಮಾನ್ಯ ಸಚಿವರು ಮಾತನಾಡಿದ್ದಾರೆ. ಕೆಲವು ಜಿಲ್ಲೆಗಳಲ್ಲಿ ಅಂದರೆ ಈಗ ನಮ್ಮ ತಾಲ್ಲೂಕಿನಲ್ಲಿ ಮೇವನ್ನು ಸಂಗ್ರಹ ಮಾಡಿ ಇಟ್ಟಿದ್ದರು. ಮಳೆ ಬಂದಿರುವುದರಿಂದ ಮೇವನ್ನು ಸಂರಕ್ಷಣೆ ಮಾಡುವುದಕ್ಕೆ ಆಗುತ್ತಿಲ್ಲ. ಈ ರೀತಿ ನಮ್ಮಲ್ಲಿ ಮೇವು ಕೊಳೆತು ಹೋಗುತ್ತಿದೆ. ಆ ಮೇವನ್ನು ನಮಗೆ ಕೊಡಿ ಎಂದು ರೈತರು ಕೇಳಿದಂತಹ ಸಂದರ್ಭದಲ್ಲಿ ನಮಗೆ ಸರ್ಕಾರದಿಂದ ಯಾವುದೇ ಮಾರ್ಗಸೂಚಿ ಇಲ್ಲ. ಮಾರ್ಗದರ್ಶನ ಇಲ್ಲ ನಾವು ಇದನ್ನು ಕೊಡುವುದಕ್ಕೆ ಆಗುವುದಿಲ್ಲ ನಾವು ಇದನ್ನು ಸಂರಕ್ಷಣೆ

ಮಾಡಬೇಕಾಗುತ್ತದೆ ಎನ್ನುವ ಉತ್ತರವನ್ನು ಅಧಿಕಾರಿಗಳು ಹೇಳುತ್ತಿದ್ದಾರೆ. ಆದ್ದರಿಂದ ದಯಮಾಡಿ ಈ ಮೇವನ್ನು ರೈತರು ಯಾರೇ ಕೇಳಿದರೂ ಸಹ ಅದನ್ನು ಕೊಡಲಿಕ್ಕೆ ಯಾವ ರೀತಿ ಸಾಧ್ಯವಗುತ್ತದೋ ಆ ರೀತಿ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

**ಶ್ರೀ ಎಂ.ಪಿ. ಪ್ರಕಾಶ್** : ಮಾನ್ಯ ಅಧ್ಯಕ್ಷರೇ, ಈ ವಿಚಾರ ನಿಜವಾಗಿಯೂ ಸಹ ಬಹಳ ಸೂಕ್ತವಾದುದು. ಮಾನ್ಯ ಶಾಸಕರು ಕೊಟ್ಟ ಸಲಹೆಯಂತೆ ಅನೇಕ ಜಿಲ್ಲೆಗಳಿಂದ ಈ ರೀತಿಯ ವರದಿಗಳು ಬಂದಿವೆ. ನಾವು ಅದನ್ನು ಸಂರಕ್ಷಣೆ ಮಾಡುತ್ತೇವೆಂದು ಹೇಳುತ್ತಾರೆ. ಆದರೆ ದೊಡ್ಡ ಮಳೆಗಾಲದಲ್ಲಿ ಅದು ಸಂರಕ್ಷಣೆಯಾಗುವುದಿಲ್ಲ. ಆ ಕಾರಣಕ್ಕೋಸ್ಕರ ನಾವು ಶೇಕಡ 50ರಷ್ಟು ರಿಯಾಯಿತಿ ದರದಲ್ಲಿ ಕೊಡಬೇಕೆಂದು ನಿರ್ಣಯ ಆಯಿತು. ಆದರೆ ಆ 50ರ ರಿಯಾಯಿತಿ ದರಲ್ಲಿ ತೆಗೆದುಕೊಳ್ಳುವಂತಹ ಜನ ಇಲ್ಲ. ಆದ್ದರಿಂದ ಎಲ್ಲೆಲ್ಲಿ ಮೇವಿನ ಸಂಗ್ರಹ ಇದೆ ಅದನ್ನು ಉಚಿತವಾಗಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕೊಡಬೇಕೆನ್ನುವ ಆಲೋಚನೆ ಸರ್ಕಾರದಲ್ಲಿದೆ. ನಾನು ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಶೀಘ್ರದಲ್ಲಿಯೇ ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ.

**ಅಧ್ಯಕ್ಷರು** : ಈಗ ನಿಯಮ 69ರ ಅಡಿಯಲ್ಲಿ ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿ ಮೀಸಲಿಟ್ಟ ಅಕ್ಕಿ ಹಾಳಾಗುತ್ತಿದೆ ಎನ್ನುವುದರ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ ಇದೆ. ಮಾನ್ಯ ಸಚಿವರನ್ನು ನಾನು ಕೇಳುತ್ತೇನೆ. ಈ ವಿಷಯವನ್ನು ತೆಗೆದುಕೊಳ್ಳೋಣವೇ?

**ಶ್ರೀ ಎಂ.ಪಿ. ಪ್ರಕಾಶ್** : ಸದನದಲ್ಲಿ ಮಾನ್ಯ ಸದಸ್ಯರು ಯಾರೂ ಇಲ್ಲ. ನಾಳೆ ತೆಗೆದುಕೊಳ್ಳೋಣ.

**ಶ್ರೀ ಎ.ಟಿ. ರಾಮಸ್ವಾಮಿ** : ಮಾನ್ಯ ಅಧ್ಯಕ್ಷರೇ, ವಿಷಯ ಬಹಳ ಮುಖ್ಯವಾದುದು, ಆದ್ದರಿಂದ ಈಗಾಗಲೇ ಅಕ್ಕಿ ಹಾಳಾಗುತ್ತಿದೆ.

**ಅಧ್ಯಕ್ಷರು** : ಕ್ಯಾಬಿನೆಟ್ ಮೀಟಿಂಗ್ ಇದೆ. ನಾಳೆ ಸಾಧ್ಯವಾದರೆ ಅವಕಾಶ ಕೊಡುತ್ತೇನೆ. ಈಗ ಸದನವನ್ನು ನಾಳೆ ಬೆಳಿಗ್ಗೆ 10-00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನ 6-49 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ಬುಧವಾರ 28ನೇ ತಾರೀಖು 2004 ರಂದು ಬೆಳಿಗ್ಗೆ ಹತ್ತು ಗಂಟೆಗೆ ಸೇರಲು ನಿಶ್ಚಯಿಸಿತು.

## 13. ಅನುಬಂಧ - I

278 (119) : ಶ್ರೀ ಅಂಗಾರ ಎಸ್. (ಸೂಳ್ಯ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2003-04ನೇ ಸಾಲಿನಲ್ಲಿ ಸರ್ವ ಶಿಕ್ಷಣ ಅಭಿಯಾನದಡಿ ಎಸ್.ಡಿ.ಎಂ.ಸಿ. ಸದಸ್ಯರಿಗೆ ಎರಡು ದಿನಗಳ ತರಬೇತಿಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಲ್ಲಿ ನಡೆಸಲಾಗಿದೆ;

---

† ಈ ಬಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.